## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 721/2022**

| | | |
|---|---|---|
| ಸಾಕ್ಷಿದಾರರ ಹೆಸರು | ಮಂಜುನಾಥ.ಪಿ. | ಪ್ರಮಾಣ ವಚನ ಬೋಧಿಸಿದ ದಿನಾಂಕಃ 23.01.2026 |
| ತಂದೆಯ ಹೆಸರು/ ಗಂಡನ ಹೆಸರು | ಲೇಟ್ ಪರಶಿವಮೂರ್ತಿ | |
| ವಯಸ್ಸು | 44 ವರ್ಷ | |
| ಉದ್ಯೋಗ | ಹೆಚ್.ಸಿ. 136, ಗುಂಡ್ಲುಪೇಟೆ ಪೊ.ಠಾಣೆ. | ಪ್ರಾಸಾಃ 3 |
| ವಾಸ | ಗುಂಡ್ಲುಪೇಟೆ | ಚಾಸಾಃ 3 |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ಈಗ್ಗೆ ನಾಲ್ಕು ವರ್ಷಗಳಿಂದ ಹೆಚ್.ಸಿ., 136 ಆಗಿ ಗುಂಡ್ಲುಪೇಟೆ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 08.09.2022 ರಂದು ಗುಂಡ್ಲುಪೇಟೆ ಪಟ್ಟಣದ ಕೆ.ಆರ್.ಸಿ. ರಸ್ತೆಯಲ್ಲಿ ಪ್ರತಿಷ್ಠಾಪನೆ ಮಾಡಿರುವ ಶ್ರೀ ವಿದ್ಯಾಗಣಪತಿ ವಿಸರ್ಜನೆ ಸಂಬಂಧ ಮೆರವಣಿಗೆ ಕರ್ತವ್ಯಕ್ಕೆ ಮಾನ್ಯ ಪಿ.ಐ ರವರು ನನ್ನನ್ನು ಹಾಗೂ ನಮ್ಮ ಪಿ.ಎಸ್.ಐ., ಸುಜಾತ ಹಾಗೂ ಹೆಚ್.ಸಿ.103 ಮತ್ತು ಪಿ.ಸಿ. 196 ರವರನ್ನು ಕರ್ತವ್ಯಕ್ಕೆ ನೇಮಿಸಿದ್ದು, ಸಂಜೆ 7.00 ಗಂಟೆ ಸಮಯದಲ್ಲಿ ನಮ್ಮ ಪಿ.ಐ ರವರು ನಮ್ಮನ್ನು ಕರೆದು ವೀರನಪುರ ಕಾಲೋನಿಯಲ್ಲಿ ಗಣಪತಿ ವಿಸರ್ಜನಾ ಮೆರವಣಿಗೆಯನ್ನು ಯಾವುದೇ ಪೂರ್ವಾನುಮತಿ ಪಡೆಯದೆ ಡಿ.ಜೆ ಧ್ವನಿವರ್ಧಕ ಉಪಯೋಗಿಸಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ ಎಂದು ಹೇಳಿ ನಮ್ಮನ್ನು ಅಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ. ನಾನು, ನಮ್ಮ ಪಿ.ಎಸ್.ಐ., ಸುಜಾತ ಹಾಗೂ ಹೆಚ್.ಸಿ. 103 ಮತ್ತು ಪಿ.ಸಿ. 196 ರವರು ವೀರನಪುರ ಕಾಲೋನಿಗೆ ಹೋಗಿದ್ದು, ಅಲ್ಲಿ ಯಾವುದೇ ಪೂರ್ವಾನುಮತಿ ಇಲ್ಲದೆ ಟಾಟಾ ಏಸಿ ನಂ. ಕೆಎ–10–5946 ನೇದ್ದರಲ್ಲಿ ಡಿ.ಜೆ. ಸಲಕರಣೆಗಳನ್ನು ಇಟ್ಟುಕೊಂಡು ಅತೀಯಾದ ಶಬ್ದ ಉಂಟಾಗುವ ರೀತಿಯಲ್ಲಿ ಅದನ್ನು ಹಾಕಿಕೊಂಡು ಸಾರ್ವಜನಿಕರಿಗೆ ಶಬ್ದ ಮಾಲಿನ್ಯ ಉಂಟು ಮಾಡುತ್ತಿದ್ದರು. ನಾವು ಅಲ್ಲಿಗೆ ಹೋಗಿ ಅಲ್ಲಿದ್ದ ಸಾರ್ವಜನಿಕರನ್ನು ವಿಚಾರಣೆ ಮಾಡಲಾಗಿ ಸದರಿ ವಿಸರ್ಜನಾ ಮೆರವಣಿಗೆ ಮುಖಂಡತ್ವವನ್ನು ಪ್ರವೀಣ, ಮಾದೇಶ ಮತ್ತು ತೇಜಾ ಎಂಬುವರು ವಹಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾವು ಟಾಟಾ ಏಸಿ ಗೂಡ್ಸ ವಾಹನ ಅದರಲ್ಲಿ ಇದ್ದ ಎರಡು ಸೌಂಡ್ ಬಾಕ್ಸ್ ಆಂಪ್ಲಿಫೈಯರ್, ಎರಡು ಪೋಕಸ್ ಲೈಟ್, ಒಂದು ಮೈಕು ಇವುಗಳನ್ನು ಹಾಗೂ ಆರೋಪಿಗಳಾದ ಪ್ರವೀಣ, ಮಾದೇಶ ಮತ್ತು ತೇಜಾ ಇವರುಗಳನ್ನು ಕರೆದುಕೊಂಡು ಠಾಣೆಗೆ ಬಂದಿರುತ್ತೇವೆ. ಸದರಿ ಘಟನೆಯ ಬಗ್ಗೆ ಪಿ.ಎಸ್.ಐ ಸುಜಾತ ರವರು ಠಾಣಾಧಿಕಾರಿಗಳವರಿಗೆ ವರದಿಯನ್ನು ನೀಡಿರುತ್ತಾರೆ. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

ಆ ದಿನ ಪೂರ್ವಾನುಮತಿ ಇಲ್ಲದೆ ಧ್ವನಿ ವರ್ಧಕಗಳನ್ನು ಬಳಸಿ ಶಬ್ದ ಮಾಲಿನ್ಯ ಉಂಟು ಮಾಡುತ್ತಿದ್ದ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ಪೊ.ಠಾಣೆಗೆ ತೆಗೆದುಕೊಂಡು ಬಂದ ಟಾಟಾ ಏಸಿ ಮತ್ತು ಡಿ.ಜೆ. ಉಪಕರಣಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಆರ್.ಡಿ ವಕೀಲರಿಂದಃ**

ದಿಃ 08.09.2022 ರಂದು ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಗಣಪತಿ ವಿಸರ್ಜನಾ ಮೆರವಣಿಗೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಟಾಟಾ ಏಸಿ ವಾಹನ ಮತ್ತು ಡಿಜಿ ಉಪಕರಣಗಳನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಪಿರ್ಯಾದುದಾರರು ನಮ್ಮ ಮೇಲಾಧಿಕಾರಿಗಳಾಗಿರುವುದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನಾ ಸ್ಥಳದಲ್ಲಿ ಆರೋಪಿಗಳು ಡಿ.ಜೆ. ಉಪಕರಣಗಳನ್ನು ಬಳಸಿರುವುದಿಲ್ಲ, ನಾನು ಡಿ.ಜೆ. ಉಪಕರಣಗಳನ್ನು ಬಳಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆ ದಿನ ವಶಪಡಿಸಿಕೊಂಡಿರುತ್ತೇವೆ ಎಂದು ಹೇಳುವ ಉಪಕರಣಗಳು ಡಿ.ಜೆ. ಉಪಕರಣಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ . ಆರೋಪಿಗಳು ಅತಿಯಾಗಿ ಶಬ್ದ ಮಾಲಿನ್ಯ ಉಂಟು ಮಾಡುವ ಯಾವುದೇ ಉಪಕರಣಗಳನ್ನು ಬಳಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಡಿ.ಜೆ. ಉಪಕರಣಗಳನ್ನು ಉಪಯೋಗಿಸಿ ಶಬ್ದ ಮಾಲಿನ್ಯ ಉಂಟು ಮಾಡದೇ ಇದ್ದರೂ ಸಹ ಅವರ ವಿರುದ್ಧ ಚಾಸಾ–1 ರವರು ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ, ಗುಂಡ್ಲುಪೇಟೆ
ಗುಂಡ್ಲುಪೇಟೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ** 721/2022

| | | |
|---|---|---|
| ಸಾಕ್ಷಿದಾರರ ಹೆಸರು | ರಾಜು | ಪ್ರಮಾಣ ವಚನ ಬೋಧಿಸಿದ ದಿನಾಂಕಃ 23.01.2026 |
| ತಂದೆಯ ಹೆಸರು/ ಗಂಡನ ಹೆಸರು | ಸಿದ್ದಯ್ಯ | |
| ವಯಸ್ಸು | 54 ವರ್ಷ | |
| ಉದ್ಯೋಗ | ಕೂಲಿ | ಪ್ರಾಸಾಃ 4 |
| ವಾಸ | ವೀರನಪುರ ಕಾಲೋನಿ | ಚಾಸಾಃ 5 |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನಾನು ಈಗ ನಿಪಿ–2 ಮಹಜರ್ ನ್ನು ನೋಡುತ್ತಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಈಗ್ಗೆ ಮೂರು ವರ್ಷಗಳ ಹಿಂದೆ ಪೊ.ಠಾಣೆಯಲ್ಲಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ. ಮಹಜರ್ ಗೆ ಮತ್ತೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿಗಳು ನಮ್ಮ ಗ್ರಾಮದವರು ಇರುತ್ತಾರೆ. ಅವರು ಯಾವ ಅಪರಾಧ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

(ಈಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಎಪಿಪಿರವರಿಂದಃ**

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ದಿಃ 31.08.2022 ರಂದು ನಮ್ಮ ಊರಿನ ಬೀದಿಯಲ್ಲಿ ಗಣೇಶ ನನ್ನು ಕೂರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 08.09.2022 ರಂದು ಗಣೇಶನ ಮೂರ್ತಿಯನ್ನು ವಿಸರ್ಜನೆ ಮಾಡುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಕಾರ್ಯಕ್ರಮಕ್ಕೆ ಆರೋಪಿಗಳು ಡಿಜೆ ಧ್ವನಿ ವರ್ಧಕವನ್ನು ಟಾಟಾ ಏಸ್ ಗೂಡ್ಸ್ ವಾಹನದ ಹಿಂಭಾಗ ಅಳವಡಿಸಿಕೊಂಡು ಸಾರ್ವಜನಿಕರಿಗೆ ತೊಂದರೆ ಉಂಟಾಗುವಂತೆ ಕರ್ಕಶವಾಗಿ ಧ್ವನಿಯನ್ನು ಉಪಯೋಗಿಸಿ ಶಬ್ದಮಾಲಿನ್ಯವನ್ನು ಉಂಟು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಪಿ.ಎಸ್.ಐ ಸುಜಾತ ರವರು ಆರೋಪಿಗಳನ್ನು ಹಾಗೂ ಟಾಟಾ ಏಸಿ ಗೂಡ್ಸ್ ವಾಹನವನ್ನು ಮತ್ತು ಡಿಜೆ ಉಪಕರಣಗಳನ್ನು ಗುಂಡ್ಲುಪೇಟೆ ಪೊ.ಠಾಣೆಗೆ ತೆಗೆದುಕೊಂಡು ಬಂದು ಇವರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿಃ 10.09.2022 ರಂದು ಪೊ.ಠಾಣೆಯಲ್ಲಿ ನನ್ನನ್ನು ಹಾಗೂ ಚೆನ್ನಯ್ಯ ರವರನ್ನು ಠಾಣೆಗೆ ಬರಮಾಡಿಕೊಂಡು ಆರೋಪಿಗಳು ಯಾವುದೇ ಪೂರ್ವಾನುಮತಿಯನ್ನು ಪಡೆಯದೇ ಬಳಸುತ್ತಿದ್ದ ಕೆಎ-01-5946 ರ ಗೂಡ್ಸ್ ವಾಹನವನ್ನು ಮತ್ತು ಡಿ.ಜೆ.ಉಪಕರಣಗಳನ್ನು ನಮ್ಮ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಮಾನತ್ತು ಮಹಜರ್ ಗೆ ನಾನು ಮತ್ತು ಚೆನ್ನಯ್ಯ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಬಗ್ಗೆ ದಿಃ 10.09.2022 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಗ್ರಾಮದವರು ಆಗಿರುವುದರಿಂದ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.**

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ
ಗುಂಡ್ಲುಪೇಟೆ.